

# ಹತ್ತು ದಿನ ಟ್ರಾಫಿಕ್ ಜಾಮ್!



ಬೆಂಗಳೂರಿನಂತಹ ಮಹಾನಗರಗಳಲ್ಲಿ ವಾಹನ ಚಲಾಯಿಸುವವರಿಗೆ ಟ್ರಾಫಿಕ್ ಜಾಮ್ ನ ಕಿರಿಕಿರಿ ಗೊತ್ತೇ ಇದೆ. ಯಾವುದಾದರೂ ಒಂದು ರಸ್ತೆಯಲ್ಲಿ ಒಂದು ಗಂಟೆಗಿಂತ ಹೆಚ್ಚು ಸಮಯ ವಾಹನಗಳು ಜಾಮ್ ಆಗಿಬಿಟ್ಟಿತು ಎಂದರೆ ಟಿ.ವಿ ಚಾನೆಲ್‌ಗಳಿಗೆ ಅದು ದೊಡ್ಡ ಸುದ್ದಿ.

ಅದೇ ಟ್ರಾಫಿಕ್ ಜಾಮ್ ಹತ್ತು ದಿನ ಆಗಿಬಿಟ್ಟರೆ...? ಅಬ್ಬಾ ಇದು ಸಾಧ್ಯವೇ ಎನ್ನಬೇಡಿ. ಏಕೆಂದರೆ ನಾಲ್ಕು ವರ್ಷಗಳ ಹಿಂದೆ ಚೀನಾದಲ್ಲಿ 10 ದಿನ ಟ್ರಾಫಿಕ್ ಜಾಮ್ ಆಗಿತ್ತು! ಬೀಜಿಂಗ್ ಟಿಬೆಟ್ ಎಕ್ಸ್‌ಪ್ರೆಸ್ ವೇ (ಬಾದಲಿಂಗ್ ಎಕ್ಸ್‌ಪ್ರೆಸ್ ವೇ) ಹೆದ್ದಾರಿಯಲ್ಲಿ ಸುಮಾರು 100 ಕಿ.ಮೀನಷ್ಟು ದೂರ ವಾಹನಗಳು 10 ದಿನಗಳ ಕಾಲ ಅಲ್ಲಾಡದೇ ನಿಂತಿದ್ದವು. ರಸ್ತೆ ರಿಪೇರಿ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ವಾಹನ ಸವಾರರು ಈ ರೀತಿ ಪರದಾಡಿದ್ದರು.

ಕಾರಿನಲ್ಲಿದ್ದವರಿಗೆ 10 ದಿನಗಳ ಕಾಲ ಹೊಟ್ಟೆಗೆ ಆಹಾರ ಪೂರೈಸಿದವರು ಸ್ಥಳೀಯ ನಾಗರಿಕರು. ಅದೂ ಸಿಕ್ಕಾಪಟ್ಟೆ ಹಣ ಪಡೆದು ಅವರು ಈ ಆಹಾರ ಪೂರೈಸಿದ್ದು.

ಟ್ರಕ್‌ಗಳಲ್ಲಿ ಎಂಟು ಟನ್ ಸಾಮರ್ಥ್ಯದ ಸರಕು ಹೊತ್ತು ಈ ಹೆದ್ದಾರಿಯಲ್ಲಿ ಸಾಗಬಹುದು. ಆದರೆ ಇಲ್ಲಿಯಂತೆ ಅಲ್ಲಿಯ ಟ್ರಕ್ ಮಾಲೀಕರು ಅದಕ್ಕಿಂತ ಅಧಿಕ ಸಾಮರ್ಥ್ಯದ ಸರಕು ಹೊತ್ತು ಸಾಗುವ ಕಾರಣ ಈ ಹೆದ್ದಾರಿ ತೀವ್ರ ಸ್ವರೂಪದಲ್ಲಿ ಹಾಳಾಗಿತ್ತು. ಈ 10 ದಿನಗಳು ಅಲ್ಲಿಯ ಮಾಧ್ಯಮಗಳಿಗೆ ಹಬ್ಬವಾಗಿತ್ತಂತೆ!

★ ಸಿಂಚನಾ ಎಸ್.ಎನ್.